ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 : ದಿನಾಂಕ: 8–4–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ:<br>ಶ್ರೀ ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು | 9–4–2015<br>ಗುರುವಾರ<br>ಸಂಜೆ<br>4–00 ಗಂಟೆಗೆ | ಕೊಠಡಿ ಸಂಖ್ಯೆ 334<br>ಸಮ್ಮೇಳನ ಸಭಾಂಗಣ,<br>ಮೂರನೇ ಮಹಡಿ,<br>ವಿಧಾನ ಸೌಧ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಸಂಚಾರಿ ಗ್ರಂಥಾಲಯ ಸೇವೆ ಸ್ಥಗಿತ

ಬೆಂಗಳೂರು, ಏಪ್ರಿಲ್ 8 (ಕರ್ನಾಟಕ ವಾರ್ತೆ)

ಸಾರ್ವಜನಿಕ ಗ್ರಂಥಾಲಯ ಇಲಾಖೆ, ನಗರ ಕೇಂದ್ರ ಗ್ರಂಥಾಲಯ, ಕೇಂದ್ರ ವಲಯ, ಬೆಂಗಳೂರು ಇಲ್ಲಿನ 'ಡಾ ಎಸ್.ಆರ್. ರಂಗನಾಥನ್' ಸಂಚಾರಿ ಗ್ರಂಥಾಲಯ ವಾಹನಕ್ಕೆ ಎಫ್.ಸಿ ಹಾಗೂ ಸಣ್ಣ ಪುಟ್ಟ ದುರಸ್ಥಿ ಮಾಡಿಸಬೇಕಾಗಿರುವುದರಿಂದ ಸಂಚಾರಿ ಗ್ರಂಥಾಲಯದ ಸೇವೆಯನ್ನು ಓದುಗರಿಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದು ಸಾರ್ವಜನಿಕ ಓದುಗರು ಸಹಕರಿಸಬೇಕಾಗಿ ಇಲಾಖೆ ಪ್ರಕಟಣೆ ಕೋರಿದೆ.

ಬಾಬು:ಜಿಪಿಆರ್.

## ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ :

# ಗಣತಿದಾರರಿಗೆ ಸೂಚನೆಗಳು

ಬೆಂಗಳೂರು, ಏಪ್ರಿಲ್ 8 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಏಪ್ರಿಲ್ 11, 2015 ರಿಂದ ಏಪ್ರಿಲ್ 30 2015 ರವರೆಗಿನ ಅವಧಿಯಲ್ಲಿ ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳುತ್ತಿದ್ದು, ಈ ಉದ್ದೇಶಕ್ಕಾಗಿ ಕುಟುಂಬದ ಎಲ್ಲಾ ಸದಸ್ಯರುಗಳಿಗೆ ಸಂಬಂಧಿಸಿದ ಶೈಕ್ಷಣಿಕ, ಸಾಮಾಜಿಕ ಹಾಗೂ ಇತರ ವಿಷಯಗಳಿಗೆ ಕುರಿತಂತೆ ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ಕುಟುಂಬದ ಅನುಸೂಚಿ (ನಮೂನೆ–3) ಯನ್ನು ಸಿದ್ದಪಡಿಸಲಾಗಿದೆ.

ಸಮೀಕ್ಷೆಯನ್ನು ಕೈಗೊಳ್ಳುವ ಗಣತಿದಾರರಿಗೆ ಜಾತಿ ಮತ್ತು ಉಪಜಾತಿಗಳನ್ನು ಸರಿಯಾಗಿ ನಮೂದಿಸಲು ಸಹಾಯವಾಗುವ ದೃಷ್ಟಿಯಿಂದ ಗಣತಿದಾರರ ಕೈಪಿಡಿಯಲ್ಲಿ ರಾಜ್ಯದಲ್ಲಿರುವ ವಿವಿಧ ಜಾತಿ/ಉಪಜಾತಿ/ಪಂಗಡಗಳಿಗೆ ಪ್ರತ್ಯೇಕ ಕೋಡ್ ಸಂಖ್ಯೆಯನ್ನು ನೀಡಲಾಗಿರುತ್ತದೆ. ಅನುಬಂಧ– 3 'ಎ' ಹಿಂದುಳಿದ ವರ್ಗಗಳ ಹಾಗೂ ಇನ್ನಿತರ ಜಾತಿ/ಉಪಜಾತಿಗಳಿಗೆ ಸಂಬಂಧಿಸಿರುತ್ತದೆ. ಅನುಬಂಧ–3 'ಬಿ' ಅನುಸೂಚಿತ ಜಾತಿ/ಉಪಜಾತಿಗಳಿಗೆ ಹಾಗೂ ಅನುಬಂಧ–3 'ಸಿ' ಪಂಗಡಗಳಿಗೆ ಸಂಬಂಧಿಸಿರುತ್ತದೆ.

ಆದರೆ ಗಣತಿದಾರರ ಕೈಪಿಡಿಯಲ್ಲಿ ಅನುಬಂಧ–3'ಬಿ' ಹಾಗೂ ಅನುಬಂಧ– '3' ಯಲ್ಲಿ ಸೇರಿರುವ ಕೆಲವು ಜಾತಿ/ಪಂಗಡಗಳಿಗೆ ಪ್ರತ್ಯೇಕ ಕೋಡ್ ಸಂಖ್ಯೆಯನ್ನು ನಮೂದಿಸದೇ, ಅವುಗಳನ್ನು ಗುಂಪಾಗಿ ನಿರ್ಧಿಷ್ಟ ಜಾತಿಯನ್ನು ಗುರುತಿಸುವುದು ಗಣತಿದಾರರಿಗೆ ಕಷ್ಟವಾಗುತ್ತದೆ ಎಂದೂ, ಆದಕಾರಣ ಪ್ರತಿಯೊಂದು ಜಾತಿ/ಉಪಜಾತಿಗೆ ಪ್ರತ್ಯೇಕ ಕೋಡ್ ಸಂಖ್ಯೆಯನ್ನು ನೀಡಲು ಮನವಿಗಳು ಬಂದ ಮೇರೆಗೆ, ಆಯೋಗವು ಪರಿಶೀಲಿಸಿ, ಅನುಸೂಚಿತ ಜಾತಿಗಳಿಗೆ ಅನ್ವಯಿಸುವ ಅನುಬಂಧ–3'ಬಿ' ಹಾಗೂ ಅನುಸೂಚಿತ ಪಂಗಡಗಳಿಗೆ ಅನ್ವಯಿಸುವ ಅನುಬಂಧ–3'ಸಿ' ಯಲ್ಲಿರುವ ಜಾತಿ/ಉಪಜಾತಿ/ ಪಂಗಡಗಳ ಕೋಡ್ ಸಂಖ್ಯೆಗಳನ್ನು ಬದಲಿಸಿ, ಆಯೋಗದ ದಿನಾಂಕ 4–4–2015 ರ ಪತ್ರದಲ್ಲಿ ಹೊರಡಿಸಲಾಗಿರುವ ಸಂಕೇತ ಸಂಖ್ಯೆಗಳನ್ನು ಅನುಸೂಚಿತ ಜಾತಿ/ಉಪ ಜಾತಿಗಳಿಗೆ 'ಬಿ' ಮತ್ತು ಅನುಸೂಚಿತ ಪಂಗಡಗಳಿಗೆ 'ಸಿ' ಯಿಂದ ಹಾಗೂ ಕೈಪಿಡಿಯಲ್ಲಿ ತಿಳಿಸಿದಂತೆ ಹಿಂದುಳಿದ ವರ್ಗಗಳ ಹಾಗೂ ಇತರೆ ಜಾತಿ/ಉಪಜಾತಿಗಳಿಗೆ 'ಎ' ಯಿಂದ ಪ್ರಾರಂಭಿಸಿ ಬರೆಯಲು ಗಣತಿದಾರರಿಗೆ ಸೂಚನೆ ನೀಡಲಾಗಿದೆ. ಕೈಪಿಡಿಯಲ್ಲಿ ನೀಡಿರುವ ಸೂಚನೆಗಳು ಸಮೀಕ್ಷೆ ದೃಷ್ಟಿಯಿಂದ ಮಾತ್ರ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಾರ್ಯದರ್ಶಿ ಶ್ರೀ ಸಿ. ಕೆಂಪಯ್ಯ ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ಕೃಷಿ ಬೆಲೆ ಆಯೋಗದ ಕಾರ್ಯಾಗಾರ

ಬೆಂಗಳೂರು, ಏಪ್ರಿಲ್ 8 (ಕರ್ನಾಟಕ ವಾರ್ತೆ)

ರಾಜ್ಯದ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕಚಾರ ಹಾಕುವುದು ಕೃಷಿ ಬೆಲೆ ಆಯೋಗದ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಈ ಕಾರ್ಯ ಆಯಾ ಪ್ರದೇಶದಲ್ಲೇ ರೈತ ಸಹಭಾಗಿತ್ವದಲ್ಲೇ ಆಗಬೇಕಾಗಿದ್ದು ರಾಜ್ಯದ ವಿವಿಧ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾನಿಲಯಗಳು. ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಸಕ್ರಿಯ ಸಹಕಾರದಲ್ಲಿ ಕೈಗೊಳ್ಳಲಾಗುವುದು. ಈ ನಿಟ್ಟಿನಲ್ಲಿ ದಿನಾಂಕ 10-04-2015 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನಲ್ಲಿ ಕೃಷಿ ಇಲಾಖೆ ಆವರಣದ 'ಸಮೃದ್ದಿ ಸಭಾಂಗಣ' ದಲ್ಲಿ ವೆಚ್ಚ ಲೆಕ್ಕಾಚಾರ ಹಾಕುವ ಕಾರ್ಯ ಪದ್ಧತಿ (methodology) ಯ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ನವದೆಹಲಿಯ ಕೇಂದ್ರ ಸರ್ಕಾರದ 'ಕೃಷಿ ವೆಚ್ಚ ಮತ್ತು ಬೆಲೆ ಆಯೋಗ (CACP) ಅಧ್ಯಕ್ಷರು ಮತ್ತು ತಂಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಕೃಷಿ ರಾಜ್ಯ ಸಚಿವ ಶ್ರೀ ಕೃಷ್ಣಭೈರೇಗೌಡರು ಅಧ್ಯಕ್ಷತೆ ವಹಿಸಲಿರುವ. ತಜ್ಞರು, ರೈತ ಪ್ರತಿನಿಧಿಗಳು, ಪ್ರಗತಿಪರ ರೈತರು ಪಾಲ್ಗೊಳ್ಳುವ ಈ ಕಾರ್ಯಾಗಾರದಲ್ಲಿ 'ಆಯೋಗದ ಸಂರಚನೆ, ಧ್ಯೇಯೋದ್ದೇಶ ಮತ್ತು ಕಾರ್ಯಚಟುವಟಿಕೆ' ಬಗೆಗಿನ ಕಿರು ಹೊತ್ತಿಗೆ ಮತ್ತು ಆಯೋಗದ ವೆಬ್‌ಸೈಟ್ www.kapricom.org ಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಆಯೋಗದ ಅಧ್ಯಕ್ಷರು ತಿಳಿಸಿದ್ದಾರೆ.

ಬಾಬು:ಜಿಪಿಆರ್.